<u>ಅಸಲು ದಾವಾ ಸಂಖ್ಯೆ **- 284/2013**</u>                    ಡಿ.ಡಬ್ಲ್ಯೂ **:- 2**

ದಿನಾಂಕಃ **15-12-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>

ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳೆಂದರೆ ಮನೆ ಮತ್ತು ಜಮೀನು ಸರ್ವೇ ನಂ.17/1, 1/1, 85/1, 12/1, 112/1 ಮತ್ತು ಇತ್ಯಾದಿಗಳು. ಸರ್ವೇ ನಂ.52/2, 85 ಮತ್ತು 112 ಜಮೀನುಗಳು ಮಾತ್ರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸರ್ವೇ ನಂ.52/2, 85 ಮತ್ತು 112 ಜಮೀನುಗಳು ಪಟೇಲ್ ಉಬಳಿ ಜಮೀನುಗಳು ಎಂದರೆ ಸರಿ. ಸದರಿ ಮೇಲ್ಕಂಡ ಜಮೀನುಗಳನ್ನು ಶಿವಮೊಗ್ಗದ ಉಪವಿಭಾಗಾಧಿಕಾರಿಗಳು ರುದ್ರಪ್ಪನ ಹಿರಿಯ ಮಗ ಹನುಮಂತಪ್ಪನಿಗೆ ಮರು ಮಂಜೂರು ಮಾಡಿದ್ದರು ಎಂದರೆ ಸರಿ. ಸರ್ವೇ ನಂ.85 ರಲ್ಲಿ ನಮ್ಮ ಅಜ್ಜನಿಗೆ 1 ಎಕರೆ 6 ಗುಂಟೆ ಜಮೀನನ್ನು ಮರು ಮಂಜೂರು ಮಾಡಿದ್ದಾರೆ ಎಂದರೆ ಸರಿ. ತಹಶೀಲ್ದಾರರವರು ಶಿವಪ್ಪರವರಿಗೆ ನೀಡಿದ ಇಂಟಿಮೇಷನ್ ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಪಿ-43 ಎಂದು, ಮರುಮಂಜೂರಾತಿ ಆದೇಶದ ಪ್ರತಿಯನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಪಿ-44 ಎಂದು, ಎಂ.ಆರ್ ನಂ.1/1976-77 ರ ಎರಡು ಮುಟೇಷನ್ ರಿಜಿಸ್ಟರ್ ಅನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಅವುಗಳನ್ನು ಕ್ರಮವಾಗಿ ನಿಪಿ-45 ಮತ್ತು 46 ಎಂದು ಗುರುತಿಸಲಾಯಿತು. ಎಂ.ಆರ್.ನಂ.5/1989-90 ರ ಮುಟೇಷನ್ ನಲ್ಲಿ ಜಂಟಿ ಜುಬಾನೆಯನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಪಿ-47 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಜಂಟಿ ಖಾತೆಯಾಗಿದೆ ಎಂದು ನುಡಿಯುತ್ತಾರೆ. ಎಂ.ಆರ್ ನಂ.5/1989-90 ರ ಮುಟೇಷನ್ ನಲ್ಲಿ ಮತ್ತು ಪಹಣಿಯಲ್ಲಿ ಸರ್ವೇ ನಂ.112 ರಲ್ಲಿ ಶಿವಪ್ಪ, ಶೇಖರಪ್ಪ ಮತ್ತು ಈಶ್ವರಪ್ಪರ ಹೆಸರಿನಲ್ಲಿ 13 ಗುಂಟೆ ಜಮೀನು ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಜಂಟಿ ಖಾತೆಯಾಗಿದೆ ಎಂದು ನುಡಿಯುತ್ತಾರೆ. ಎಂ.ಆರ್ ನಂ.5/1989-90 ರ

ಮುಟೇಷನ್ ಮತ್ತು ಪಹಣಿಯನ್ನು  ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಪಿ-48 ಮತ್ತು 49 ಎಂದು ಗುರುತಿಸಲಾಯಿತು. ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ ಟ್ರಾಕ್ಟ್ ನಲ್ಲಿ ಸ್ವತ್ತಿನ ನಂ.46/1 ಮತ್ತು 46/2 ನಮ್ಮ ಅಜ್ಜನ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಡಿಮ್ಯಾಂಡ್ ರಿಜಿಸ್ಟರ್ ನ್ನು ನಿಪಿ-50 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಸಿ/ಸಿ.ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.